ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 11–11–2020

# ಮಾಧ್ಯಮ ಆಮಂತ್ರಣ

1) ನೂತನ ಕಾರ್ಯಕ್ರಮ "ರೈತರೊಂದಿಗೆ ದಿನ" ಕುರಿತು ಪತ್ರಿಕಾ ಗೋಷ್ಠಿ :

ಬಿ. ಸಿ. ಪಾಟಿಲ್, ಕೃಷಿ ಸಚಿವರು

ದಿನಾಂಕ : 12–11–2020, ಬುಧವಾರ, ಸಮಯ : ಮಧ್ಯಾಹ್ನ 1.00 ಗಂಟೆಗೆ

ಸ್ಥಳ : ಕೊಠಡಿ ಸಂಖ್ಯೆ : 406, ವಿಕಾಸಸೌಧ, ಬೆಂಗಳೂರು.

# ಪತ್ರಿಕಾ ಪ್ರಕಟಣೆ

## ಮಹಿಳೆಯರ ಸುರಕ್ಷತೆಗಾಗಿ 751 ದ್ವಿಚಕ್ರ ವಾಹನಗಳ ಹಸ್ತಾಂತರ : ಬಿ.ಎಸ್. ಯಡಿಯೂರಪ್ಪ

ಬೆಂಗಳೂರು, ನವೆಂಬರ್ 11 (ಕರ್ನಾಟಕ ವಾರ್ತೆ) : ಪೊಲೀಸ್ ಇಲಾಖೆಯನ್ನು ಮತ್ತಷ್ಟು ಬಲಿಷ್ಠಗೊಳಿಸುವ ಹಾಗೂ ಮಹಿಳೆಯರ ಸುರಕ್ಷತೆ ಮತ್ತು ಭದ್ರತೆಗೆ ಹೆಚ್ಚಿನ ಆದ್ಯತೆ ನೀಡುವ ಉದ್ದೇಶದಿಂದ ನಿರ್ಭಯಾ ಯೋಜನೆಯಡಿ 751 ದ್ವೀಚಕ್ರ ವಾಹನಗಳನ್ನು ರಾಜ್ಯ ಪೊಲೀಸ್ ಇಲಾಖೆಗೆ ಹಸ್ತಾಂತರಿಸಲಾಗಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ವಿಧಾನಸೌಧದ ಬೃಹತ್ ಮೆಟ್ಟಿಲುಗಳ ಮುಂಭಾಗದಲ್ಲಿ ಇಂದು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನಿರ್ಭಯ ಯೋಜನೆಯಡಿ ರಾಜ್ಯ ಪೊಲೀಸ್ ಇಲಾಖೆಗೆ 751 ದ್ವಿ–ಚಕ್ರ ವಾಹನಗಳನ್ನು ಹಸ್ತಾಂತರಿಸಿ ಮಾತನಾಡಿದ ಅವರು ಪೊಲೀಸ್ ಇಲಾಖೆಗೆ ಇದರಿಂದ ಮತ್ತಷ್ಟು ವೇಗವನ್ನು ನೀಡಿದಂತಾಗುತ್ತದೆ. ಬೆಂಗಳೂರಿನಂತ ಬೃಹತ್ ನಗರದಲ್ಲಿ ದ್ವೀಚಕ್ರ ವಾಹನಗಳು

ಸುಲಭವಾಗಿ ಸಂಚರಿಸಬಲ್ಲವು, ಇದರಿಂದ ಅಪರಾಧಿಗಳನ್ನು ಹಿಡಿಯಲು ಸಹಾಯವಾಗುತ್ತದೆ ಎಂದು ಹೇಳಿದರು.

ದೇಶದಲ್ಲೆ ಕರ್ನಾಟಕ ರಾಜ್ಯ ಅತ್ಯುತ್ತಮ ಕಾನೂನು ಮತ್ತು ಸುವ್ಯವಸ್ಥೆ ಹೊಂದಿರುವ ರಾಜ್ಯವಾಗಿದೆ. ಮಹಿಳೆಯರ ಸುರಕ್ಷತೆಗಾಗಿ ಸರ್ಕಾರವು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಬಿಎಂಟಿಸಿಯಲ್ಲಿ ಸುರಕ್ಷತಾ ಉಪಕರಣಗಳನ್ನು ಸಹ ಅಳವಡಿಸಿದೆ. ಮಹಿಳೆಯರ ಬಗೆಗಿನ ದೃಷ್ಟಿಕೋನವನ್ನು ಬದಲಾಯಿಸಲು ಎಲ್ಲರೂ ಒಗ್ಗೂಡಿ ಶ್ರಮಿಸಬೇಕೆಂದರು.

ನಿರ್ಭಯಾ ಯೋಜನೆಯಡಿ ಮಾನವ ಕಳ್ಳಸಾಕಾಣಿಕೆ ನಿಷೇಧ ದಳಗಳ ಸೃಜನೆಗಾಗಿ 30 ಕೇಂದ್ರಗಳಿಗೆ 51 ಮೋಟಾರ್ ಸೈಕಲ್‌ಗಳನ್ನು ಸಹ ಮಂಜೂರು ಮಾಡಲಾಗಿದೆ ಎಂದ ಅವರು, ಕೇಂದ್ರ ಸರ್ಕಾರವು ರಾಜ್ಯದಲ್ಲಿ 700 ಪೊಲೀಸ್ ಠಾಣೆಗಳಲ್ಲಿ ಮಹಿಳಾ ಸಹಾಯ ಕೇಂದ್ರಗಳನ್ನು ಪ್ರಾರಂಭಿಸಲು ಹಾಗೂ ಅದರ ನಿರ್ವಹಣೆಗಾಗಿ 7 ಕೋಟಿ ರೂ. ಗಳನ್ನು ಒದಗಿಸಿದೆ ಎಂದರು.

ಗೃಹ ಸಚಿವ ಬಸವರಾಜ ಬೊಮ್ಮಾಯಿ ಮಾತನಾಡಿ, ಒಂದು ವರ್ಷದಲ್ಲಿ ಕರ್ನಾಟಕ ರಾಜ್ಯ ಪೊಲೀಸರು ಅತ್ಯಂತ ದಕ್ಷ ಹಾಗೂ ಪ್ರಾಮಾಣಿಕತೆಯಿಂದ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಇಡೀ ರಾಷ್ಟ್ರದಲ್ಲಿ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅಲ್ಲದೆ ಒಂದು ವರ್ಷದಲ್ಲಿ ಅಪರಾಧ ಪ್ರಕರಣಗಳು ಸಹ ಬಹಳಷ್ಟು ಕಡಿಮೆಯಾಗಿದೆ. ಡ್ರಗ್ ವಿರುದ್ಧದ ಸಮರ ಯಶಸ್ವಿಯಾಗಿ ಮುಂದೆ ಸಾಗಿದ್ದು, ಮುಂದೆ ನಿರಂತರವಾಗಿ ನಡೆಯಲಿದೆ ಎಂದರು.

ಮುಖ್ಯಮಂತ್ರಿಗಳು ಇಲಾಖೆಯ ಹಲವಾರು ಬೇಡಿಕೆಗಳನ್ನು ಈಡೇರಿಸಲು ಸಹಾಯ ಹಸ್ತವನ್ನು ನೀಡಿದ್ದು, ಸುಮಾರು 16 ಸಾವಿರ ಸಿಬ್ಬಂದಿ ನೇಮಕಾತಿಗೆ ಅನುಮತಿ ನೀಡಿದ್ದಾರೆ. ಬೆಂಗಳೂರು ನಗರ ಸುರಕ್ಷಿತ ಯೋಜನೆ ಆದಷ್ಟು ಬೇಗನೆ ಕಾರ್ಯಗತವಾಗುತ್ತದೆ ಎಂದರು.

ಅಪರಾಧ ಪ್ರಕರಣಗಳಲ್ಲಿ ಮುಖ್ಯವಾಗಿ ಬೇಕಾಗಿರುವ ಆಧುನಿಕವಾಗಿರುವಂತಹ ಎಫ್‌ಎಸ್‌ಎಲ್ ಲ್ಯಾಬ್ ಕೂಡ ಸಿದ್ಧವಾಗಿದ್ದು, ದೀಪಾವಳಿಯ ನಂತರ ಮುಖ್ಯಮಂತ್ರಿಗಳು ಉದ್ಘಾಟನೆ ಮಾಡಲಿದ್ದಾರೆ ಎಂದರು.

ಸಮಾರಂಭದಲ್ಲಿ ಒಳಾಡಳಿತ ಇಲಾಖೆಯ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ಡಾ: ರಜನೀಶ್ ಗೋಯಲ್, ಪೊಲೀಸ್ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರಾದ ಪ್ರವೀಣ್ ಸೂದ್ ಹಾಗೂ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

ಛಾಯಾಚಿತ್ರ ಲಗತ್ತಿಸಿದೆ)

# ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ

## ನೂತನ ಯೋಜನೆಗಳ ಆನ್‌ಲೈನ್ ಅರ್ಜಿ: ವೆಬ್ ಸೈಟ್‌ಗೆ ಚಾಲನೆ

**ಬೆಂಗಳೂರು, ನವೆಂಬರ್ 11 (ಕರ್ನಾಟಕ ವಾರ್ತೆ):**

ಕೋವಿಡ್ ಹಿನ್ನೆಲೆಯಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಸಂತ್ರಸ್ತರಿಗೆ ಕಿರು ಸಾಲ ಯೋಜನೆ ಸೇರಿ (ವೈಯಕ್ತಿಕ) ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಸಹಾಯವಾಗಲು ಕರ್ನಾಟಕ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ನೂತನ ವೆಬ್ ಸೈಟ್ ಅಭಿವೃದ್ಧಿ ಪಡಿಸಲಾಗಿದ್ದು, ಇನ್ನೂ ಮುಂದೆ ಕಚೇರಿಗಳಿಗೆ ಅರ್ಜಿ ಹಾಕಲು ಅಲೆಯಬೇಕಾಗಿರುವುದಿಲ್ಲ ಎಂದು ಕರ್ನಾಟಕ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಖ್ತಾರಹುಸೇನ್ ಎಫ್ ಪಠಾಣ್ ಅವರು ತಿಳಿಸಿದರು.

ಇಂದು ನಗರದ ವಿವಿ ಟವರ್‌ನಲ್ಲಿರುವ ಅಭಿವೃದ್ಧಿ ನಿಗಮದ ಕಚೇರಿಯಲ್ಲಿ ವೆಬ್‌ಸೈಟ್‌ಗೆ ಚಾಲನೆ ನೀಡಿ ಮಾತನಾಡಿದ ಅವರು ಕಿರು ಸಾಲಯೋಜನೆ(ವೈಯಕ್ತಿಕ) ಯಡಿಯಲ್ಲಿ ಮಹಿಳೆಯರಿಗಾಗಿ ಸಾಲ ನೀಡಲಾಗುತ್ತಿದ್ದು, 2020-21ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಲು ಈ ಡಿಸೆಂಬರ್ 10ರವರೆಗೆ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಈ ಯೋಜನೆಯಡಿಯಲ್ಲಿ ಸಾಲ ಪಡೆಯಲು ಅರ್ಜಿದಾರರು ನಿಗಮದ ಯಾವುದೇ ಯೋಜನೆಯಲ್ಲೂ ಇದುವರೆಗೆ ಸಾಲ ಅಥವಾ ಸಹಾಯಧನ ಪಡೆದಿರಬಾರದು.

ಬಿಪಿಎಲ್ ಕಾರ್ಡ್ ಹೊಂದಿರುವ ಅಲ್ಪಸಂಖ್ಯಾತ ಸಮುದಾಯದ 23,000 ಮಹಿಳೆಯರಿಗೆ ಸಾಲ ನೀಡಲು ಉದ್ದೇಶಿಸಲಾಗಿದ್ದು, ಅರ್ಜಿದಾರರು 25 ರಿಂದ 50 ವಯೋಮಾನದೊಳಗಿರಬೇಕು. ತಳ್ಳುವಗಾಡಿಯಲ್ಲಿ ವ್ಯಾಪಾರ, ಬೀದಿವ್ಯಾಪಾರ, ಜಾತ್ರೆಗಳಲ್ಲಿ ವ್ಯಾಪಾರ, ಕಿರಾಣೀ ಅಂಗಡಿ, ಅರಿಷಿನ/ಕುಂಕುಮ/ ಅಗರಬತ್ತಿ/ಕರ್ಪೂರ, ಪಾದಚಾರಿ ಮಾರ್ಗದಲ್ಲಿ, ಟೀ/ಕಾಫಿಮಾರಾಟ, ಎಳನೀರು ವ್ಯಾಪಾರ, ಹೂವಿನ ವ್ಯಾಪಾರ, ತರಕಾರಿ ವ್ಯಾಪಾರ, ಹಣ್ಣಿನ ವ್ಯಾಪಾರ, ಇನ್ನಿತರ ಸಣ್ಣ ವ್ಯಾಪಾರ ನಡೆಸಲು ಆರಂಭಿಕ ಬಂಡವಾಳಕ್ಕಾಗಿ ರೂ.10,000/- ಮೊತ್ತದ (ರೂ.8000/- ಸಾಲ+ರೂ.2,000/-ಸಬ್ಸಿಡಿ) ಅಲ್ಪಾವಧಿ ಸಾಲ ಯೋಜನೆಯಾಗಿದೆ.

2020–21ನೇ ಸಾಲಿನ ನಿಗಮದಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಯೋಜನೆಗಳು 'ವೃತ್ತಿ ಪ್ರೋತ್ಸಾಹ' ಯೋಜನೆ(ಪರಿಷ್ಕೃತ), 'ಅರಿವು' (ವಿದ್ಯಾಭ್ಯಾಸ ಸಾಲ) ಸಾಲ ಯೋಜನೆ (ಪರಿಷ್ಕೃತ), ಗಂಗಾ ಕಲ್ಯಾಣ ಯೋಜನೆ, ಶ್ರಮಶಕ್ತಿ ಯೋಜನೆ, ಸಣ್ಣ (ಮೈಕ್ರೋ) ಸಾಲ ಮತ್ತು ಸಹಾಯಧನ ಯೋಜನೆ, ಗೃಹ ನಿರ್ಮಾಣ– ಮಾರ್ಜಿನ್ ಹಣ ಸಾಲ ಯೋಜನೆ, ಪಶು ಸಂಗೋಪನೆ ಯೋಜನೆ, ಟ್ಯಾಕ್ಸಿ/ಗೂಡ್ಸ್ ವಾಹನ ಖರೀದಿಸಲು ಸಹಾಯಧನ ಯೋಜನೆ(ಪರಿಷ್ಕೃತ), ಅಲ್ಪಸಂಖ್ಯಾತರ ರೈತರ ಕಲ್ಯಾಣ ಯೋಜನೆ, "ಆಟೋ ಮೊಬೈಲ್ ಸರ್ವಿಸ್, ಬಿದರಿ ಮತ್ತು ರೇಷ್ಮೆ, ಚನ್ನಪಟ್ಟಣ ಕರಕುಶಲ ಚಟುವಟಿಕೆಗಳಿಗೆ ತರಬೇತಿ ಪ್ರೋತ್ಸಾಹ ಹಾಗೂ ಸಾಲ ಮತ್ತು ಸಹಾಯಧನ ಹಾಗೂ ಮೂಲಭೂತ ಸೌಕರ್ಯ ನೀಡಲಾಗುವುದು", ಮನೆ ಮಳಿಗೆ ಯೋಜನೆ, ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮದ (ಎನ್.ಎಂ.ಡಿ.ಎಫ್.ಸಿ) ಯೋಜನೆಗಳು.

ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಆನ್–ಲೈನ್ ಮೂಲಕ ಕೆಳಕಂಡ ವೆಬ್ ಪೇಜ್‌ನಲ್ಲಿ ಸಲ್ಲಿಸತಕ್ಕದ್ದು.

ಅರಿವು(ವಿದ್ಯಾಭ್ಯಾಸ ಸಾಲ)**kmdc.kar.nic.in/arivu2**

ಇತರೆ ಎಲ್ಲಾ ಯೋಜನೆಗಳು **kmdc.kar.nic.in/loan/login.aspx**

ಮೈಕ್ರೋ ಸಾಲ (ವೈಯಕ್ತಿಕ) ಯೋಜನೆ **kmdcmicro.karnataka.gov.in**

ಇದೇ ಸಂದರ್ಭದಲ್ಲಿ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷರಾದ ಅಬ್ದುಲ್ ಅಸೀಮ್ ಅವರು ಮಾತನಾಡಿ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಬಜೆಟ್ ಅನುದಾನ ಹೆಚ್ಚಿಸುವಂತೆ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದೆ. ನಿಗಮದಿಂದ ಸಿಗುವ ಯಾವುದೇ ನೆರವಿಗೆ ಫಲಾನುಭವಿಗಳು ದಳ್ಳಾಳಿಗಳನ್ನು ಸಂಪರ್ಕಿಸಬಾರದು. ಏಜೆಂಟ್ ಹಾವಳಿಯನ್ನು ನಿಲ್ಲಿಸಲಾಗಿದೆ. ಎಲ್ಲಾ ಯೋಜನೆಗಳು ಪಾರದರ್ಶಕವಾಗಿ ಫಲಾನುಭವಿಗಳಿಗೆ ದೊರೆಯಬೇಕು ಎಂಬ ಉದ್ದೇಶದಿಂದ ಹಲವು ಕ್ರಮಗಳನ್ನು ಕೈಗೊಂಡಿದ್ದೇವೆ. ಯಾವುದೇ ಸಮಸ್ಯೆ ಇದ್ದರೂ ನೇರವಾಗಿ ನಿಗಮದ ಕಚೇರಿಗೆ ಬಂದು ಪರಿಹಾರ ಕಂಡುಕೊಳ್ಳಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸೈಯಿದಾ ಅಯಿಷಾ, ಕ.ಅ.ಸೇ.(ಹಿ.ಶ್ರೇ) ವ್ಯವಸ್ಥಾಪಕ ನಿರ್ದೇಶಕರು, ಹಾಗೂ ಪ್ರಮುಖರು ಭಾಗವಹಿಸಿದ್ದರು.

# ದತ್ತು ಸ್ವೀಕಾರ

**ಬೆಂಗಳೂರು, ನವೆಂಬರ್ 11 (ಕರ್ನಾಟಕ ವಾರ್ತೆ)**

**ನೇಚರ್ ಕ್ಲಬ್ ಜೆ.ಎಸ್.ಎಸ್. ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್ ಮೈಸೂರು ಅವರು ಮೈಸೂರು ಮೃಗಾಲಯದ ಹುಲಿ, ನೀಲಗಿರಿ ಲಂಗೂರ್, ಮೌಸ್ ಜಿಂಕೆ ಮತ್ತು ನವಿಲು ಪ್ರಾಣಿಯನ್ನು ಒಂದು ವರ್ಷದ ಅವಧಿಗೆ ದತ್ತು ಸ್ವೀಕಾರ ಮಾಡಿದ್ದಾರೆ.**

**ಮೈಸೂರು ಮೃಗಾಲಯದ ಪ್ರಾಣಿಗಳ ದತ್ತು ಸ್ವೀಕಾರ ಯೋಜನೆ ಅಡಿಯಲ್ಲಿ ಮೇಘ ಕೆ. ಎನ್. ಬೆಂಗಳೂರು ಇಂಡಿಯನ್ ಮುಂಟ್ಜಾಕ್ , ಜಿ. ಶ್ರೀದೇವಿ ಮೈಸೂರು ಇಂಡಿಯನ್ ಗ್ರೇಟ್ ಹಾರ್ನ್‌ಬಿಲ್, ಶಿಲ್ಪ ಲೋಕೇಶ್, ಮೈಸೂರು ಲವ್‌ಬರ್ಡ್, ನಾಗಭೂಷಣ್ ಬಿ. ಬೆಂಗಳೂರು ಬುಡ್ಗರಿಗಾರ್, ದರ್ಶನ್ ಕೀರ್ತಿ ಮೈಸೂರು, ನಾಗರಹಾವು, ಡಾ: ಎ. ರಂಗಸ್ವಾಮಿ ಮೈಸೂರು ನವಿಲು, ಮಾಸ್ಟರ್ ಅಕ್ಷರನ್ ವರ್ದರಾಜನ್ ಬೆಂಗಳೂರು ಇವರು ಆಸ್ಟ್ರೇಲಿಯನ್ ರೇನ್ಬೋ ಲೋರಿಕಿಟ್ ಪ್ರಾಣಿಯನ್ನು ದತ್ತು ಸ್ವೀಕಾರ ಮಾಡಿರುತ್ತಾರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

# ನೀರಿನ ಅದಾಲತ್

**ಬೆಂಗಳೂರು, ನವೆಂಬರ್ 11 (ಕರ್ನಾಟಕ ವಾರ್ತೆ)**

ಬೆಂಗಳೂರು ಜಲಮಂಡಳಿಯು ದಿನಾಂಕ:12.11.2020 ಗುರುವಾರ ದಂದು **ಸಕಾನಿಅ(ಪೂರ್ವ)-2-3, (ಪೂರ್ವ)-1-2, (ದಕ್ಷಿಣ-2), (ಆಗ್ನೇಯ-4), (ಪಶ್ಚಿಮ-2), (ನೈರುತ್ಯ-2), (ಆಗ್ನೇಯ-2), (ವಾಯುವ್ಯ-3), (ಕೇಂದ್ರ-2), (ಉತ್ತರ-2), (ಈಶಾನ್ಯ-1) ಮತ್ತು (ಉತ್ತರ ವಿಲೇಜ್-1)** ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತ್ತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ನೀರಿನ ಅದಾಲತ್‌ಅನ್ನು ಬೆಳಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸುತ್ತಿದ್ದು, ಅದಾಲತ್ ನಡೆಯುವ ಸ್ಥಳಗಳ ವಿವರ ಈ ಕೆಳಗಿನಂತಿದೆ.

| ಉಪವಿಭಾಗದ ಹೆಸರು | ವಿಳಾಸ | ದೂರವಾಣಿ ಸಂಖ್ಯೆ |
|---|---|---|
| (ಪೂರ್ವ)-2-3 | 1ನೇ ಮುಖ್ಯ ರಸ್ತೆ, ಕಸ್ತೂರಿನಗರ, ಬೆಂಗಳೂರು-43. | 9845444058 |
| (ಪೂರ್ವ)-1-2 | ಎ. ನಾರಾಯಣಪುರ ಮುಖ್ಯ ರಸ್ತೆ, ಕೆ.ಆರ್.ಪುರಂ ರೈಲ್ವೇ ನಿಲ್ದಾಣದ ಎದುರು, ಪಟಾಲಮ್ಮ ದೇವಸ್ಥಾನದ ಹತ್ತಿರ, ಹನುಮಾನ್ ಜಂಕ್ಷನ್, ಎ.ನಾರಾಯಣಪುರ, | 9740984162 |

| | | |
|---|---|---|
| | ಬೆಂಗಳೂರು-16 | |
| **(ದಕ್ಷಿಣ-2)** | ವಾಟರ್ ಟ್ಯಾಂಕ್ ಹತ್ತಿರ, 100 ಅಡಿ ರಸ್ತೆ, ಬಿ.ಟಿ.ಎಂ 2ನೇ ಹಂತ, ಬೆಂಗಳೂರು-76 | 40977432 |
| **( ಆಗ್ನೇಯ-4)** | 2ನೇ ಅಡ್ಡರಸ್ತೆ, 17ನೇ ಮುಖ್ಯರಸ್ತೆ, ಕೋರಮಂಗಲ 3ನೇ ಬ್ಲಾಕ್, ಬೆಂಗಳೂರು-34 | 9591988970 |
| **(ಪಶ್ಚಿಮ-2)** | 5ನೇ ಹಂತ, 1ನೇ ಮುಖ್ಯರಸ್ತೆ, ಬಿ.ಇ.ಎಂ.ಎಲ್. ಲೇಔಟ್, ರಾಜರಾಜೇಶ್ವರಿ ನಗರ, ಬೆಂಗಳೂರು-98 | 28611826 |
| **(ನೈರುತ್ಯ-2)** | ನೆಲಮಹಡಿ, 1ನೇ ಮುಖ್ಯ ರಸ್ತೆ, ಬನಶಂಕರಿ 3ನೇ ಹಂತ, ಬನಗಿರಿನಗರ, ಬೆಂಗಳೂರು.-85 | 22945144 |
| **(ಆಗ್ನೇಯ-2)** | 10ನೇ ಮುಖ್ಯ ರಸ್ತೆ, 7ನೇ ಅಡ್ಡ ರಸ್ತೆ, ಇಂದಿರಾನಗರ ಕ್ಲಬ್ ಹಿಂಭಾಗ, ಹೆಚ್.ಎ.ಎಲ್ 2ನೇ ಹಂತ, ಬೆಂಗಳೂರು. | 9845444070 |
| **(ವಾಯುವ್ಯ-3)** | 5ನೇ ಬ್ಲಾಕ್, ಹೊರವರ್ತುಲ ರಸ್ತೆ, ನಾಗರಬಾವಿ, ಬೆಂಗಳೂರು. | 23212181 |
| **(ಕೇಂದ್ರ-2)** | ಮಿಲ್ಲರ್ಸ್ ರಸ್ತೆ, ಹೈಗ್ರೌಂಡ್ಸ್, ಬೆಂಗಳೂರು-52 | 22945191 |
| **(ಉತ್ತರ-2)** | 1ನೇ ಮಹಡಿ, ಪಿನಾಕಿನಿ ಭವನ, ದೊಡ್ಡಬಳ್ಳಾಪುರ ಮುಖ್ಯ ರಸ್ತೆ, ಯಲಹಂಕ ನ್ಯೂ ಟೌನ್, ಬೆಂಗಳೂರು-64 | 9740984163 |
| **(ಈಶಾನ್ಯ-1)** | ಕೊಠಡಿ ಸಂಖ್ಯೆ 115, 1ನೇ ಮಹಡಿ, ಸುವರ್ಣಭವನ, 18ನೇ ಅಡ್ಡರಸ್ತೆ, ಮಾರ್ಗೋಸ ರಸ್ತೆ, ಮಲ್ಲೇಶ್ವರಂ, ಬೆಂಗಳೂರು. | 22945131 |
| **(ಉತ್ತರ ವಿಲೇಜ್ -1)** | 1ನೇ ಮಹಡಿ, 7ನೇ ಮುಖ್ಯ ರಸ್ತೆ, ಎಂ.ಇ.ಐ ಲೇಔಟ್, ಹೆಸರಘಟ್ಟ ರಸ್ತೆ, ಬೆಂಗಳೂರು-73 | 9845444068 |

**ಮೇಲೆ ತಿಳಿಸಲಾದ ಉಪವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಸೇವಾಠಾಣೆಗಳ ವಿವರ ಈ ಕೆಳಕಂಡಂತಿದೆ.**

| **ಉಪವಿಭಾಗದ ಹೆಸರು** | **ಸೇವಾಠಾಣೆಗಳು** |
|---|---|
| **(ಪೂರ್ವ)-2-3** | ಬಾಣಸವಾಡಿ, ಓ.ಎಂ.ಬಿ.ಆರ್,ಲಿಂಗರಾಜಪುರಂ, ಕಸ್ತೂರಿನಗರ |
| **(ಪೂರ್ವ)-1-2** | ಎ.ನಾರಾಯಣಪುರ, ದೊಡ್ಡನಕುಂದಿ, ವಿಜ್ಞಾನ ನಗರ, |
| **(ದಕ್ಷಿಣ-2)** | ಹೆಚ್.ಎಸ್. ಆರ್-1, ಕೋಡಿಚಿಕ್ಕನಹಳ್ಳಿ, ಬೊಮ್ಮನಹಳ್ಳಿ |
| **(ಆಗ್ನೇಯ-4)** | ಕೋರಮಂಗಲ 1 &2, ಬೆಳ್ಳಂದೂರು |

| | |
|---|---|
| **(ಪಶ್ಚಿಮ-2)** | ಕೆಂಗೇರಿ, ಐಡಿಯಲ್ ಹೋಮ್ಸ್, ಬಿ.ಇ.ಎಂ.ಎಲ್ ಲೇಔಟ್, ಆರ್.ಆರ್.ನಗರ |
| **(ನೈರುತ್ಯ-2)** | ಕತ್ರಿಗುಪ್ಪೆ, ಹೊಸಕೆರೆಹಳ್ಳಿ, ದೇವಗಿರಿ-1, ಇಟ್ಟಮಡು, ಬನಗಿರಿನಗರ |
| **(ಆಗ್ನೇಯ-2)** | ಜೀವನ್ ಭೀಮಾನಗರ, ಹೆಚ್.ಎ.ಎಲ್ 2ನೇ ಹಂತ, ಇಂದಿರಾನಗರ, ಬೈಯ್ಯಪ್ಪನಹಳ್ಳಿ, ಸಿ.ವಿ.ರಾಮನ್‌ನಗರ, ಸದಾನಂದನಗರ |
| **(ವಾಯುವ್ಯ-3)** | ನಾಗರಬಾವಿ, ಅನ್ನಪೂರ್ಣೇಶ್ವರಿನಗರ, ಸರ್.ಎಂ.ವಿ ಲೇಔಟ್, ಮೂಡಲಪಾಳ್ಯ |
| **(ಕೇಂದ್ರ-2)** | ಹೈಗ್ರೌಂಡ್ಸ್, (ಹೆಚ್.ಜಿ.ಆರ್), ಕೋಲ್ಸ್ ಪಾರ್ಕ್, ಮಿಲ್ಲರ್ಸ್ ರಸ್ತೆ |
| **(ಉತ್ತರ-2)** | ಯಲಹಂಕ ಓಲ್ಡ್ ಟೌನ್, ಯಲಹಂಕ ನ್ಯೂಟೌನ್, ಅಟ್ಟೂರು |
| **(ಈಶಾನ್ಯ-1)** | ಮಲ್ಲೇಶ್ವರಂ-1&2, ಶ್ರೀರಾಮಪುರ, ಯಶವಂತಪುರ-1&2, ಭಾಷ್ಯಂಪಾರ್ಕ್ |
| **(ಉತ್ತರ ವಿಲೇಜ್-1)** | ಶೆಟ್ಟಿಹಳ್ಳಿ, ಅಬ್ಬಿಗೆರೆ, ಚಿಕ್ಕಸಂದ್ರ, ಸಿಡೇದಹಳ್ಳಿ, ದೊಡ್ಡಬಿದರಕಲ್ಲು |

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ:22238888, ಸಹಾಯವಾಣಿ 1916 ಹಾಗೂ ವಾಟ್ಸ್‌ಆಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದಾಗಿದೆ. ಸಾರ್ವಜನಿಕರು ಮೇಲಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ಅದಾಲತ್ ಸೌಲಭ್ಯವನ್ನು ಬಳಸಿಕೊಳ್ಳಬಹುದಾಗಿದೆ ಹಾಗೂ ಕೋವಿಡ್-19 ನ ಮರುತೆರವು ಮಾರ್ಗಸೂಚಿಯನ್ವಯ ಸಭೆಗೆ ಹಾಜಾರಾಗಲಿರುವ ಸಂದಂರ್ಭದಲ್ಲಿ ಎಲ್ಲಾ ಸುರಕ್ಷತೆಯನ್ನು ಕಾಪಾಡಿಕೊಳ್ಳುವುದು

# water adalath

BWSSB water Adalath is held on 12.11.2020 in **AEE (East-2)-3, (East-1)-2, (South -2), (South East-4), (West-2), (South West-2), (South East-2), (North West-3), (Central -2), (North -2), (North East-1) and (North Village-1)** sub divisions from 9:30.am to 11.00 am to settle the grievances concerned with the water billing, delay in providing water supply & sanitary connections, delay in converting from domestic connection to non

domestic connection & other related issues. The details of the places where the Adalath is held is as follows.

| Sub-division | Address | Phone Number |
|---|---|---|
| **(East-2)-3** | 1st Main Road, Kasturinagar, Bengalore-43 | 9845444058 |
| **(East-1)-2** | A.Narayanapura Main Road, opp KR Puram Railway Station, Near Patalamma Temple, Hanuman Junction, A.Narayanapura, Bangalore-16. | 9740984162 |
| **(South-2)** | Near Water Tank, 100 feet Road, BTM 2nd Stage, Bangalore-76 | 40977432 |
| **(South East-4)** | 2nd Cross, 17th main, Koramangala 3rd Block, Bangalore-34 | 9591988970 |
| **(West-2)** | 5th Stage, 1st main, BEML Layout, RR Nagar, Bangalore-98 | 28611826 |
| **(South West-2)** | Ground Floor, 1st Main, Banashankari 3rd Stage, Banagirinagar, Bangalore-85 | 22945144 |
| **(South East-2)** | 10th Main Road, 7th Cross, Behind Indiranagar club, HAL 2nd Stage, Bangalore. | 9845444070 |
| **(North West-3)** | 5th Block, Outer Ring Road, Nagarabhavi, Bangalore | 23212181 |
| **(Central-2)** | Millers Road, High Grounds, Bangalore-52 | 22945191 |
| **(North -2)** | 1st Floor, Pinakini Bhavan, Doddaballapura Main road, Yalahanka New Town, Bengalore -64 | 9740984163 |
| **(Nort East-1)** | Room No.115, 1st Floor, Suvarna Bhavan, 18th cross, Margosa Road, Malleshwaram, Bangalore. | 22945131 |
| **(North Village-1)** | 1st floor, 7th Main, MEI Layout, Hesaraghatta Road, Bangalore-73 | 9845444068 |

**The details of service stations coming under the subdivisions mentioned**

above are as follows:

| Sub-division | Service Stations |
|---|---|
| **(East-2)-3** | Banaswadi, OMBR, Lingarajapuram, Kasturinagar |
| **(East-1)-2** | A.Narayanapura, Doddanakundi, Vignana nagar |
| **(South -2)** | HSR- 1, Kodichikkanahalli, Bommanahalli |
| **(South East-4)** | Koramangala -1 &2, Bellandur |
| **(West-2)** | Kengeri, Ideal Homes, BEML Layout, RR Nagar |
| **(South West-2)** | Katriguppe, Hosakerehalli, Devagiri-1, Ittamadu, Banagirinagar |
| **(South East-2)** | Jeevanbheemanagar, HAL 2nd Stage, Indiranagar, Byappanahalli, CV Raman Nagar, Sadanandanagar |
| **(North West-3)** | Nagarabhavi, Annapoorneshwarinagar, Sir.MV Layout, Moodalapalya |
| **(Central -2)** | High Grounds(HGR), Coles Park, Millars road |
| **(North -2)** | Yelahanka old town, Yelahanka New town, Attur |
| **(North East-1)** | Malleshwaram-1&2, Srirampura, Yeshwanthapura -1&2, Bashyam park |
| **(North Village -1)** | Shettihalli, Abbigere, Chikkasandra, Sidedahalli, Doddabidarakallu |

For any problems regarding the water supply and all, publics can contact 24x 7 call centre: 22238888, helpline number: 1916 & whats app no: 8762228888. Public can utilize this adalath facilities to solve the problems regarding water supply. public are requested to follow all precautionary measures according to **Covid-19 Re-open** guidelines while attending the adalath.

## ಬ್ಯಾಂಕ್ ನೌಕರರಿಗೆ ಕನ್ನಡ ಕಲಿಸಿ; ಇಲ್ಲವೆ ಬಿಡುಗಡೆಗೊಳಿಸಿ: ಟಿ.ಎಸ್.ನಾಗಾಭರಣ

**ಬೆಂಗಳೂರು:** ಕೆನರಾ ಬ್ಯಾಂಕ್ ಸೇರಿದಂತೆ ಕರ್ನಾಟಕದಲ್ಲಿರುವ ಬಹುತೇಕ ಬ್ಯಾಂಕ್‌ಗಳು ರಾಜ್ಯ ಸರ್ಕಾರದ ಭಾಷಾನೀತಿಯನ್ನು ಉಲ್ಲಂಘಿಸುತ್ತಿದ್ದು, ಈ ಬಗ್ಗೆ ಕೂಡಲೇ ಕ್ರಮಕೈಗೊಳ್ಳಬೇಕು ಎಂದು **ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಟಿ.ಎಸ್.ನಾಗಾಭರಣ** ಅವರು ಕರ್ನಾಟಕ ರಾಜ್ಯ ಬ್ಯಾಂಕರುಗಳ (ಎಸ್.ಎಲ್.ಬಿ.ಸಿ) ಸಮಿತಿಗೆ ತಾಕೀತು ಮಾಡಿದರು.

ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಾವಳಿಗಳು, ನೇಮಕಾತಿ ಪ್ರಕ್ರಿಯೆ ಹಾಗೂ ಆಡಳಿತದಲ್ಲಿನ ಸಂಪೂರ್ಣ ಕನ್ನಡ ಅನುಷ್ಠಾನ ಕುರಿತು ವಿಧಾನಸೌಧದಲ್ಲಿಂದು ಜಾಲಸಂಪರ್ಕ ಸಭೆ ನಡೆಸಿದ ಅಧ್ಯಕ್ಷರು, ಬ್ಯಾಂಕುಗಳಲ್ಲಿ ಸಿ ಮತ್ತು ಡಿ ಹುದ್ದೆಯಲ್ಲಿರುವ ಕನ್ನಡ ಬಾರದ ಕನ್ನಡೇತರರ ಮೇಲೆ ಇದೂವರೆವಿಗೂ ಯಾವುದೇ ಕ್ರಮ ಕೈಗೊಂಡಿಲ್ಲದಿರುವ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು.

ಕನ್ನಡೇತರರು ನೇಮಕಾತಿ ಆದ 6 ತಿಂಗಳಿನಲ್ಲಿ ಕನ್ನಡವನ್ನು ಓದಲು ಮತ್ತು ಬರೆಯಲು ಕಲಿತು ಗ್ರಾಹಕರೊಂದಿಗೆ ಸ್ಥಳೀಯ ಭಾಷೆಯಲ್ಲಿ ಸಂವಹನ ನಡೆಸಬೇಕು. ಈ ಬಗ್ಗೆ ಭಾಷಾನೀತಿಯ ಆದೇಶದಲ್ಲೇ ಉಲ್ಲೇಖವಿದ್ದರೂ ನೇಮಕಾತಿ ಆಗಿ 5–6 ವರ್ಷ ಕಳೆದರೂ ಕನ್ನಡ ಕಲಿಯದ ನೌಕರರ ವಿರುದ್ಧ ಯಾವುದೇ ಕ್ರಮಕೈಗೊಂಡಿಲ್ಲ. ಆದ್ದರಿಂದ ಈಗಲಾದರೂ ಕನ್ನಡ ಬಾರದ ಅಧಿಕಾರಿಗಳಿಗೆ ಕನ್ನಡ ಕಲಿಸುವ ಕೆಲಸ ಆಗಬೇಕು, ಇಲ್ಲವೇ ಅವರನ್ನು ಬಿಡುಗಡೆಗೊಳಿಸಿ ಕನ್ನಡಿಗರನ್ನು ನೇಮಿಸಿಕೊಳ್ಳಬೇಕು ಎಂದು ಸೂಚಿಸಿದರು.

ಸ್ಥಳಿಯ ಭಾಷೆಯಲ್ಲಿ ಪರೀಕ್ಷೆ ಎದುರಿಸಲು ಸಹಕಾರಿಯಾಗುವ ನಿಟ್ಟಿನಲ್ಲಿ ನಿಯಮಾವಳಿಯನ್ನು ಬದಲಾಯಿಸುವ ಅಗತ್ಯವಿದೆ. ಕನ್ನಡದ ಮಕ್ಕಳಿಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹೆಚ್ಚೆಚ್ಚು ಅವಕಾಶಗಳು ದೊರಕುವ ನಿಟ್ಟಿನಲ್ಲಿ ಪೂರಕ ಯೋಜನೆಗಳನ್ನು ಎಸ್.ಎಲ್.ಬಿ.ಸಿ.ಯು ಹಮ್ಮಿಕೊಳ್ಳಬೇಕಿದೆ. ಬ್ಯಾಂಕಿಂಗ್ ಹುದ್ದೆಗಳಿಗೆ ಆಯ್ಕೆಯಾಗಲು ಇರುವ ಮಾನದಂಡಗಳಿಗೆ ಪೂರಕವಾದ ಕೌಶಲ್ಯ ತರಬೇತಿಯನ್ನು ಅಭ್ಯರ್ಥಿಗಳಿಗೆ

ನೀಡಿದಲ್ಲಿ ಕನ್ನಡಿಗರು ಆಯ್ಕೆಯಾಗಲು ಸಹಕಾರಿಯಾಗುತ್ತದೆ. ಗ್ರಾಮೀಣ ರೈತರು, ನಾಗರಿಕರೊಂದಿಗೆ ಕನ್ನಡದಲ್ಲಿ ವ್ಯವಹರಿಸಲು ಸಹಕಾರಿಯಾಗಲಿದೆ ಎಂದು ಹೇಳಿದರು.

ಮಾತು ಮುಂದುವರಿಸಿದ ಅಧ್ಯಕ್ಷರು, ಪ್ರಾಧಿಕಾರದಿಂದ ಎಸ್.ಎಲ್.ಬಿ.ಸಿ.ಗೆ ಬರೆಯುವ ಯಾವುದೇ ಪತ್ರಗಳಿಗೂ ಉತ್ತರ ನೀಡದೆ ಉದ್ಧಟತನ ತೋರುವುದು ಸರಿಯಲ್ಲ. ಬ್ಯಾಂಕುಗಳಲ್ಲಿ ಕನ್ನಡವನ್ನು ಬಳಸದಿರುವ ಬಗ್ಗೆ ಸಾಕಷ್ಟು ದೂರುಗಳು ಬರುತ್ತಿವೆ. ಅಲ್ಲದೆ ಚಲನ್‌ಗಳು, ಸಾಲದ ಅರ್ಜಿನಮೂನೆಗಳು ಇಂಗಿಷ್ ಭಾಷೆಯಲ್ಲಿರುವುದರಿಂದ ರೈತರು ತುಂಬಾ ತೊಂದರೆ ಅನುಭವಿಸುತ್ತಿರುವ ಬಗ್ಗೆಯೂ ಪ್ರಾಧಿಕಾರಕ್ಕೆ ದೂರುಗಳು ದಾಖಲಾಗುತ್ತಿವೆ. ನೀವು ಮಾತ್ರ ಮಾಹಿತಿ ಕೇಳಿದರೂ ಉತ್ತರ ನೀಡದೆ ಜಾಣಕುರುಡರಂತೆ ವರ್ತಿಸುವುದು ಸರಿಯಲ್ಲ ಎಂದು ಬೇಸರ ವ್ಯಕ್ತಪಡಿಸಿರು.

ಕನ್ನಡ ಕಾಯಕ ವರ್ಷಾಚರಣೆ ವರ್ಷದಲ್ಲಿ ಯಾವುದೇ ಕಾರಣಕ್ಕೂ ನೆಪಗಳನ್ನು ಹೇಳದೆ ಶೇ.100ರಷ್ಟು ಕನ್ನಡ ಅನುಷ್ಠಾನ ಮಾಡಲು ಬದ್ಧತೆ ತೋರುವಂತೆ ತಾಕೀತು ಮಾಡಿದರು.

**ಮಾನ್ಯ ಮುಖ್ಯಮಂತ್ರಿಗಳ ಇ–ಆಡಳಿತ ಸಲಹೆಗಾರರಾದ ಬೇಳೂರು ಸುದರ್ಶನ** ಅವರು ಜಾಲತಾಣಗಳ ಕುರಿತು ಸಂಕ್ಷಿಪ್ತ ಮಾಹಿತಿ ನೀಡಿದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಕೆ.ಮುರಳಿಧರ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಡಾ.ವೀರಶೆಟ್ಟಿ, ಎಸ್.ಎಲ್.ಬಿ.ಸಿ. ಖಜಾಂಚಿ ಚಂದ್ರಶೇಖರರಾವ್, ಡೆಪ್ಯೂಟಿ ಜನರಲ್ ಮ್ಯಾನೇಜರ್ ಹೆಚ್.ಎಂ.ಬಸವರಾಜು, ವಿಭಾಗೀಯ ಪ್ರಬಂಧಕರಾದ ಸಿ.ಬಸವರಾಜು, ಕನ್ನಡಪರ ಚಿಂತಕರಾದ ಡಾ.ಎಸ್.ಟಿ.ರಾಮಚಂದ್ರ, ನಾರಾಯಣ ರಾಯಚೂರು ಮತ್ತಿತರರು ಉಪಸ್ಥಿತರಿದ್ದರು.